ಇಂದು ದಿಃ**27-02-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃಶ್ರೀ ಕೆ.ವಿ.ಆರ್ ವಕೀಲರಿಂದ 4, 7 ಮತ್ತು 8 ವಾದಿಗಳ ಪರಃ**

ನನಗೆ ಈಗ ವಯಸ್ಸು 95 ವರ್ಷ. ನಾನು 4 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ಬೇವಿನಹಳ್ಳಿಯಲ್ಲಿ ಶಾಲೆ ಕಲಿತ್ತಿದ್ದೇನೆ. ಶಾಲೆ ಕಲಿತ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆಗಳನ್ನು ಹುಡುಕಿದರು, ಸಿಗದ ಹಾಗೇ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಸರ್ಕಾರಿ ಶಾಲೆಯಲ್ಲಿ ಕಲಿತ್ತಿದ್ದು ಎಂದರೆ ಸರಿ. ಶಾಲಾ ದಾಖಲೆಗಳನ್ನು ಪಡೆಯ ಬಹುದು ಎಂದರೆ ಸಾಕ್ಷಿ ಹುಡುಕಿದರು ಎಂದು ಹೇಳುತ್ತಾರೆ. ಶಾಲಾ ದಾಖಲೆಗಳನ್ನು ಪಡೆಯಲು ಅರ್ಜಿಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಮಹೇಶಪ್ಪ ಇವರಿಗೆ ಕರಿಬಸಪ್ಪ ಮತ್ತು ಸಿದ್ದಲಿಂಗಪ್ಪ ಎಂಬ ಮಕ್ಕಳು ಇರುತ್ತಾರೆ. ನಿ.ಪಿ-1 ನ್ನು ನಾನು ಹಾಜರುಪಡಿಸಿರುತ್ತೇನೆ.

**ಮುಂದಿನ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.